International Journal of Kannada Research 2019; 5(4): 28-30




International Journal of Kannada Research
www.kannadajournal.com

**ISSN: 2454–5813**
IJKR 2019; 5(4): 28-30
© 2019 IJKR
www.kannadajournal.com
Received: 22-08-2019
Accepted: 24-09-2019

**ಲೋಹಿತ್.ಪಿ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಅಕ್ಷರ ಇನ್ಸ್ಟಿಟ್ಯೂಟ್ ಆಫ್
ಮ್ಯಾನೇಜ್‌ಮೆಂಟ್ ಸ್ಟಡೀಸ್
ಚೆನ್ನಮುಂಬಾಪುರ,
ಜೆ.ಎನ್.ಎನ್.ಕಾಲೇಜ್ ಎದುರು,
ಸವಳಂಗ ರಸ್ತೆ, ಅಕ್ಷರ ನಗರ
ಶಿವಮೊಗ

**Corresponding Author:**
**ಲೋಹಿತ್.ಪಿ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಅಕ್ಷರ ಇನ್ಸ್ಟಿಟ್ಯೂಟ್ ಆಫ್
ಮ್ಯಾನೇಜ್‌ಮೆಂಟ್ ಸ್ಟಡೀಸ್
ಚೆನ್ನಮುಂಬಾಪುರ,
ಜೆ.ಎನ್.ಎನ್.ಕಾಲೇಜ್ ಎದುರು,
ಸವಳಂಗ ರಸ್ತೆ, ಅಕ್ಷರ ನಗರ
ಶಿವಮೊಗ

# ಜನಪದ ಸಂಪ್ರದಾಯ ಆಚರಣೆಯಲ್ಲಿ ಹಬ್ಬಗಳು

**ಲೋಹಿತ್.ಪಿ**

ಮಾನವ ಅನಾದಿ ಕಾಲದಿಂದಲೂ ಪ್ರಕೃತಿಯನ್ನು ಕುತೂಹಲದ ಕಣ್ಣಿನಿಂದ ನೋಡುತ್ತಾ ಬಂದಿದ್ದಾನೆ. ಪ್ರಕೃತಿಯ ವಿಕೋಪಕ್ಕೆ ಹೆದರಿ ಭಯದಿಂದ ನಡುಗಿದ್ದಾನೆ. ಆರಾಧನೆಯಿಂದ ಪ್ರಕೃತಿಯ ಉಗ್ರರೂಪವನ್ನು ತಣಿಸಲು ಸಾಧ್ಯವೆಂದು ಭಾವಿಸಿ ಆರಾಧಿಸಿದ್ದಾನೆ. ಹಕ್ಕಿಪಕ್ಷಿಗಳ ಕೂಗಿಗೆ ಮನಸೋತು ಅವುಗಳ ಧ್ವನಿಗೆ ಧ್ವನಿಬೆರಸಿ ಹಾಡಿದ್ದಾನೆ. ಭೂಮಿ, ಆಕಾಶ, ಬ್ರಹ್ಮಾಂಡವನ್ನು ಕಂಡು ಮೂಕ ವಿಸ್ಮಿತನಾಗಿ ಕಲ್ಪನೆಗಳನ್ನು ಹರಿಬಿಟ್ಟಿದ್ದಾನೆ. ಕಣ್ಣಮುಂದಿರುವುದೆಲ್ಲವನ್ನು ಪರೀಕ್ಷಿಸುತ್ತಾ, ಸರಿಕಂಡಿದ್ದನ್ನು ಸ್ವೀಕರಿಸುತ್ತಾ ಪರಿಷ್ಕರಿಸುತ್ತಾ ಮುನ್ನಡೆದು ಬಂದಿದ್ದಾನೆ. ಹೀಗೆ ಮನುಕುಲ ಅನಾದಿಕಾಲದಿಂದ ಪಡೆದುಕೊಂಡ ಅನುಭವಗಳ ಮೊತ್ತವನ್ನು ಜಾನಪದವೆಂದು ಹೇಳಬಹುದು. ಮಾನವ ಸಮಾಜದಲ್ಲಿನ ಆರಾಧನೆ, ಆಚರಣೆ, ಸಂಪ್ರದಾಯ, ಸಾಹಿತ್ಯ, ಕಲೆ, ನೃತ್ಯ, ವೈದ್ಯ, ಭಾಷೆ ಇವೇ ಮೊದಲಾದವು ಜಾನಪದದ ವ್ಯಾಪ್ತಿಗೆ ಬರುತ್ತವೆ. ಇನ್ನೂ ಸೂಕ್ಷ್ಮವಾಗಿ ವಿಚಾರಮಾಡಿದಾಗ ಇದು ಜಾನಪದ ಅಲ್ಲವೆಂದು ವಿಂಗಡಿಸಿ ಹೇಳುವುದು ಸಾಧ್ಯವಿಲ್ಲದಷ್ಟು ಜಾನಪದದ ಕ್ಷೇತ್ರವು ವ್ಯಾಪಕವಾಗಿದೆ. ಮಾನವನ ಬದುಕಿನ ಪೂರ್ಣವ್ಯಾಪಾರವನ್ನು ಜಾನಪದ ಒಳಗೊಂಡಿದೆ. ಜಾನಪದ ಅಷ್ಟುವ್ಯಾಪಕವೂ, ಅನಾದಿಯೂ ಆದುದು.
ಆದಿಮಾನವನ ಕಾಲದಿಂದಲೂ ಸಂಪ್ರದಾಯಗಳು ಆಚರಣೆಯಲ್ಲಿವೆ. ಆದಿಯಲ್ಲಿ ಮಾನವನು ಪ್ರಕೃತಿಯ ಶಕ್ತಿಗಳಿಗೆ ಭಯಪಟ್ಟು ಅದರ ಉಗ್ರರೂಪವನ್ನು ಆರಾಧನೆಯಿಂದ ಶಾಂತಗೊಳಿಸಬಹುದೆಂದು ಬಗೆದಿರಬೇಕು. ಪ್ರಕೃತಿಯ ಆರಾದನೆ ಕಾಲಕ್ರಮೇಣ ಸಂಪ್ರದಾಯಗಳಾಗಿ ಜನಪದರಲ್ಲಿ ಆಚರಣೆಯಲ್ಲಿವೆ. ಪುರಾಣ, ನಂಬಿಕೆಗಳು ಸಂಪ್ರದಾಯಗಳನ್ನು ಗಟ್ಟಿಗೊಳಿಸಿವೆ. ಆರ್ಥಿಕ, ಸಾಮಾಜಿಕ,ಭಾವನಾತ್ಮಕ ಕಾರಣಗಳು ಸಂಪ್ರದಾಯಗಳನ್ನು ವಿಧಿವತ್ತಾಗಿ ಆಚರಿಸುವಂತೆ ಮಾಡಿವೆ. ಆದಿಮಾನವನ ಕಾಲದಲ್ಲಿ ಆಚರಣೆಗಳು ಉಗ್ರವಾದ ಸ್ವರೂಪದಲ್ಲಿದ್ದವು ಕಾಲಕ್ಕೆ ತಕ್ಕಂತೆ ಅವು ಸೌಮ್ಯರೂಪವನ್ನು ತಾಳಿವೆ. ಮಾನವ ಸಮಾಜದ ಹಿತರಕ್ಷಣೆಗೆ ಕೆಲವು ಸಂಪ್ರದಾಯಗಳು ಆಚರಣೆಯಲ್ಲಿದ್ದರೇ, ಪಶು ಪಕ್ಷಿ, ಪ್ರಕೃತಿ ಸಸ್ಯಮರ್ಗಗಳ ಹಿತವನ್ನು ರಕ್ಷಣೆ ಮಾಡುವ ಹಿನ್ನೆಲೆಯಲ್ಲಿ ಕೆಲವು ಸಂಪ್ರದಾಯಗಳು ಆಚರಣೆಯಲ್ಲಿವೆ.

## ಹಬ್ಬ

ಹಬ್ಬ, ಭಾರತೀಯ ಸಂಸ್ಕೃತಿಯ ಪ್ರತೀಕಗಳು. ಇವುಗಳಲ್ಲಿ ಭಾರತೀಯ ಸಂಸ್ಕೃತಿ ಘನೀಕರಣವಾಗಿದೆ. ಕೃತಿ, ಸಾಹಿತ್ಯ, ನೃತ್ಯ ಮೊದಲಾದವುಗಳು ಬೆಳೆದು ಉಳಿದುಬರಲು ಹಬ್ಬಗಳ ಕೊಡುಗೆ ಅಪಾರ. ಹಬ್ಬಗಳ ಆಚರಣೆ ಇಲ್ಲದಂತಾದರೆ ಅವುಗಳೊಂದಿಗೆ ನಮ್ಮ ಸಂಸ್ಕೃತಿಯ ಅನೇಕ ಆಚರಣೆಗಳು ಸ್ಥಗಿತಗೊಳ್ಳುತ್ತವೆ. ಎಂತಹ ಸಂದರ್ಭದಲ್ಲಿಯೂ ಭಾರತೀಯರು ಹಬ್ಬವನ್ನು ಆಚರಿಸದೇ ಇರಲಾರರು. ಜನಪದ ಗೀತಾಂಜಲಿಯಲ್ಲಿ ಹಬ್ಬದ ಆಚರಣೆಯನ್ನು ಕುರಿತ ಗೀತೆ ಗಂಡ–ಹೆಂಡತಿಯ ಸಂಭಾಷಣೆಯ ರೂಪದಲ್ಲಿದೆ. ಸಂಭಾಷಣೆ ಸ್ವಾರಸ್ಯಕರವಾಗಿದೆ. ತಿಳಿ ಹಾಸ್ಯದಿಂದ ಕೂಡಿದ ಈ ಗೀತೆ ಹಬ್ಬದ ಒಳಿತು ಕೆಡಕುಗಳನ್ನು ಚರ್ಚಿಸುತ್ತದೆ. ನಿಜವಾದ ಹಬ್ಬ ಯಾವುದು ಎಂಬುದನ್ನು ವಿವೇಚಿಸುತ್ತದೆ. ಹಬ್ಬಗಳು ಬಂದಾಗ ಹಬ್ಬಕ್ಕೆ ಬೇಕಾದ ಸಿಹಿತಿನಿಸು, ಬಟ್ಟೆಬರೆಗಳ ಕಡೆಗೆ ಹೆಣ್ಣಿನ ಗಮನ ಹರಿಯುವುದು ಸಹಜ. ಅಂತೆಜ. ಅಂತೆಯೇ ಅವಳು ಗಂಡನನ್ನು ಕುರಿತು ಹಬ್ಬಕ್ಕೆ ಅಗತ್ಯವಿರುವ ವಸ್ತುಗಳ ಕಡೆಗೆ ಗಮನ ಸೆಳೆಯುತ್ತಾಳೆ.

> ನಾಳೆ ಬೆಳಗಾಗ ನಮುಗ್ ಹಬ್ಬ ಬಂತಲ್ಲ
> ನಮುಗ್ ಹಬ್ಬ ಬಂತಲ್ಲ
> ಗೋಧಿ ಬೆಲ್ಲಗಳಿಲ್ಲ ಕಾಯಿ ಮೊದಲಿಲ್ಲ......

ಎಂದು ಗಂಡನನ್ನು ಕೇಳುತ್ತಾಳೆ. ಬಡತನದಿಂದ ಅವುಗಳನ್ನು ತರುವುದಕ್ಕೆ ಆಗಿರುವುದಿಲ್ಲವೆಂಬುದು ಸತ್ಯ. ನಿಜವಾದ ಹಬ್ಬ ಯಾವುದೆಂಬುದನ್ನು ಗಂಡ ವಿವೇಚಿಸುವ ರೀತಿ ನಿಜಕ್ಕೂ ಮೆಚ್ಚುವಂತದ್ದಾಗಿದೆ. ಹಬ್ಬವನ್ನು ಹೊಸ ಉಡುಗೆ-ತೊಡುಗೆಯಿಂದ ಸಿಹಿ ತಿನಿಸುಗಳಿಂದ ಆಚರಿಸಲೂಬಹುದು. ಆದರೆ ಹಬ್ಬದ ಅಂತರಾರ್ಥ ಅಷ್ಟೇ ಅಲ್ಲ ಉರ್ವಿಗೀಶ್ವರನ ಪೂಜೆ ಮಾಡೋದೆ ಹಬ್ಬ ಎಂದು ಉತ್ತರಿಸುತ್ತಾನೆ. ದೈವ ಆರಾಧನೆಯು ಹಬ್ಬದ ಪರಮ ಉದ್ದೇಶವಾಗಬೇಕು ಎಂಬುದರ ಕಡೆಗೆ ಗಮನ ಸೆಳೆಯುತ್ತದೆ.

ಭಾರತೀಯ ಸಮಾಜದಲ್ಲಿ ಹಬ್ಬವೆಂದರೆ ಸಡಗರ ಹೆಚ್ಚು. ಸಿರಿವಂತರು ವೈಭವದಿಂದ ಹಬ್ಬವನ್ನು ಆಚರಿಸುತ್ತಾರೆ. ಇಲ್ಲದ ಬಡವರು ಶ್ರೀಮಂತರ ವೈಭವವನ್ನು ನೋಡಿ ತಾವು ಹಾಗೆಯೇ ಆಚರಿಸಲು ಪೈಪೋಟಿ ಮಾಡುತ್ತಾರೆ. ಅದಕ್ಕಾಗಿ ಸಾಲಸೋಲಗಳನ್ನು ಮಾಡಿಕೊಳ್ಳುತ್ತಾರೆ. ಜಮೀನು ಮನೆಗಳನ್ನು ಅಡವಿಡುತ್ತಾರೆ. ಅವು ಇಲ್ಲದಿರುವವರು ಮಕ್ಕಳನ್ನು ಜೀತಕ್ಕೆ ಇಡುತ್ತಾರೆ. ಆ ರೀತಿ ಆಚರಿಸುವುದರಿಂದ ಯಾರಿಗೂ ಪ್ರಯೋಜನವಿಲ್ಲ.

ಸಾಲವಿಲ್ಲದ ಸಂಸಾರವೇ ಹಬ್ಬ
ಸಂಸಾರವೇ ಹಬ್ಬ
ಜೀವಕ್ಕೆ ವ್ಯಾಧಿ ಇಲ್ಲದಿರುವುದೇ ಹಬ್ಬ......

ಸಾಲವಿಲ್ಲದೆ ನೆಮ್ಮದಿಯಿಂದ ಜೀವನ ಮಾಡುವುದೇ ನಿಜವಾದ ಹಬ್ಬ. ಸಾಲದಿಂದ ಜೀವನಕ್ಕೆ ವ್ಯಾದಿ ಬರುವಂತಾದರೆ ಆ ರೀತಿ ಹಬ್ಬದ ಆಚರಣೆಯಿಂದ ಯಾರಿಗೂ ಪ್ರಯೋಜನವಾಗಲಾರದು.

ಹಂಗು ಇಲ್ಲದೆ ಉಂಬೋದೆ ಹಬ್ಬ
ತಿರಿದುಂಬೋದೆ ಹಬ್ಬ
ಕರ್ಣಂಗಳ್ ಹರಿಕಥೆ ಕೇಳೋದೆ ಹಬ್ಬ........

ಸಾಲಮಾಡಿ ಹಂಗಿನಲ್ಲಿ ಹಬ್ಬದೂಟವನ್ನು ಉಣ್ಣುವುದಕ್ಕಿಂತ ಹಂಗು ಇಲ್ಲದ ಗಂಜಿಯೇಲೇಸು. ಅದಕ್ಕೆಂದೆ ಇರಬೇಕು ನಮ್ಮ ಹಬ್ಬಗಳ ಆಚರನೆಯಲ್ಲಿ ಖರ್ಚು ಕಡಿಮೆ ಆರಾಧನೆಯು ಮುಖ್ಯವಾಗಿರುತ್ತದೆ.

**ಹಂತಿ ಹಾಡು**

ಭಾರತೀಯ ಸಮಾಜ ಕೃಷಿ ಪ್ರಧಾನ ಸಮಾಜ. ಮುಂಗಾರು ಮಳೆ ಬಿದ್ದಾಗ ಕೃಷಿ ಚಟುವಟಿಕೆಗಳು ಪ್ರಾರಂಭವಾಗುತ್ತವೆ. ಹೊಲವನ್ನು ಉತ್ತು ಹಸನುಗೊಳಿಸಿ, ಬಿತ್ತು, ಕಳೆಕಿತ್ತು, ಬೆಳೆ ಬೆಳೆದು ಮಾಗಿಯ ಕಾಲಕ್ಕೆ ಬೆಳೆಯನ್ನು ಕೊಯ್ದು ಒಟ್ಟುತ್ತಾರೆ. ಒಟ್ಟಿದ್ದ ಬೆಳೆಯನ್ನು ಸೂಕ್ತ ಕಾಲದಲ್ಲಿ ಒಕ್ಕಲು ಮಾಡಿ ಕಾಳನ್ನು ಹೇರಿಕೊಂಡು ಮನೆಗೆ ತರುತ್ತಾರೆ. ಹೊಲ ಉಳುಮೆ ಮಾಡುವ ದಿನದಿಂದ ಕಾಳನ್ನು ಮನೆಗೆ ತರುವವರೆಗೂ ರೈತನು ಹಾಡುತ್ತಾ ಮನದ ದಣಿವನ್ನು ನಿವಾರಿಸಿಕೊಳ್ಳುತ್ತಾನೆ. ಕೃಷಿ ಚಟುವಟಿಕೆಯಲ್ಲಿ ರೈತನು ಒಕ್ಕಲು ಮಾಡುವಾಗ ಹಾಡುವ ಗೀತೆಗಳನ್ನು ಹಂತಿಯ ಹಾಡುಗಳೆಂದು ಕರೆಯುತ್ತಾರೆ. ಈ ಹಾಡುಗಳಲ್ಲಿ ರೈತನ ಮನಸ್ಸಿನ ಅಂತರಾಳದ ಭಾವಗಳು ಅಭಿವ್ಯಕ್ತಗೊಂಡಿವೆ.

ಹಂತಿಯ ಹಾಡುಗಳಲ್ಲಿ ಶೃಂಗಾರ, ಹಾಸ್ಯ ರಸಗಳು ಪ್ರಧಾನವಾಗಿ ಕಂಡುಬರುತ್ತವೆ. ಅನೇಕ ಸಂದರ್ಭಗಳಲ್ಲಿ ಸವಾಲು ಜವಾಬುಗಳೂ ಇರುವುದುಂಟು. ಆದಾಗ್ಯೂ, ಹಂತಿಯ ಹಾಡುಗಳು ದೇವರ ಸ್ತುತಿಯೊಂದಿಗೆ ಪ್ರಾರಂಭವಾಗುತ್ತವೆ.

ನಿನ್ನ ಹೆಸರಿಲೆ ಹಂತಿ ಹೊನ್ನ ಮುತ್ತಿನ ರಾಶಿ
ಹಣ್ಣಾದ ಮನಸ್ಸಿನೊಕ್ಕಲಿಗ ಒಕ್ಕುವನು
ಕನ್ನೆ ಶಿವಭಕ್ತಿದಾಸೋಹ

ಜನಪದರು ಯಾವುದೇ ಕೆಲಸವನ್ನು ಪ್ರಾರಂಭಿಸುವ ಮೊದಲು ದೈವವನ್ನು ಸ್ತುತಿಸುತ್ತಾರೆ. ಇಲ್ಲಿ ನಡೆಯುವ ಹಂತಿಯು ಶಿವನ ಹೆಸರಿನದ್ದು. ಹಂತಿಯ ಕಾರ್ಯ ಸರ್ವವೂ ಶಿವಾರ್ಪಿತ. ಶಿವನಾಮದ ಹಂತಿಯಿಂದ ಸಿಕ್ಕದ್ದು, ಮುತ್ತಿನ ರಾಶಿ. ಬೆಳೆಯನ್ನು ಒಕ್ಕಲು ಮಾಡಿ ಕಾಳು ರಾಶಿ ಹಾಕಿದ್ದಾಗ, ಅದು ನೋಡಲು ಮುತ್ತಿನಂತೆ ಕಾಣುವುದನ್ನು ರೈತ ಹಿಗ್ಗಿನಿಂದ ಮುತ್ತಿನ ರಾಶಿ ಎಂದಿರುವುದು ಅರ್ಥಪೂರ್ಣವಾಗಿದೆ. ಈ ಪದ್ಯ ಭಾಗದಲ್ಲಿ ಬರುವ ಒಕ್ಕಲು ಮಾಡಿದವನು ಹಣ್ಣಾದ ಮನಸ್ಸಿನ ಒಕ್ಕಲಿಗ ಎಂದಿರುವುದು ಅರ್ಥಗರ್ಭಿತವಾಗಿದೆ.

ಹಂತಿಯ ಹಾಡುಗಳು ಒಕ್ಕಲಿಗರ ಬದುಕಿನ ಅನೇಕ ಮುಖಗಳ ಮೇಲೆ ಬೆಳಕು ಚೆಲ್ಲುತ್ತವೆ. ಅವರ ನಂಬಿಕೆ ನಡುವಳಿಗಳು ಹಂತಿಯ ಹಾಡುಗಳಲ್ಲಿ ಕಾಣಬಹುದಾಗಿದೆ. ಹಂತಿಯ ಕೆಲಸ, ಅದಕ್ಕೆ ಬಳಸುವ ಉಪಕರಣಗಳು ಸಹ ಹಂತಿಯ ಹಾಡುಗಳಲ್ಲಿ ಜೀವ ಪಡೆದುಕೊಳ್ಳುತ್ತವೆ.

ಕಣದೊಳಕ ಒಕ್ಕಲಿಗ ಧನಿಯೆತ್ತಿ ಬೆಳತನಕ
ಧನಿಯೆಂದು ಹಾಡಿ ಬೆಳಕೊಂಡು ಒಕ್ಕುವನು
ಕಣರಾಶಿ ಉಣಿಸಿ ಜಂಗಮಕ

ಒಕ್ಕಲಿಗರು ಹೊತ್ತು ಮುಳುಗಿದ ಸ್ವಲ್ಪ ಹೊತ್ತಿಗೆ ಹಂತಿಯನ್ನು ಕಟ್ಟುತ್ತಾರೆ. ಆ ಕೆಲಸ ಬೆಳತನಕ ನಡೆಯುತ್ತದೆ. ಹಂತಿಯ ಬೇಸರವನ್ನು ಕಳೆದು ಬೆಳತನಕ ಕೆಲಸದಲ್ಲಿ ಲವಲವಿಕೆ ಉಳಿಸಲು ಹಾಡುಗಳು ಅವರಿಗೆ ನೆರವು ನೀಡುತ್ತವೆ. ಒಕ್ಕಲು ಮಾಡಿ ಕಣದಲ್ಲಿ ರಾಶಿಯನ್ನು ಕಟ್ಟಿದ ಮೇಲೆ ಮೊದಲಿಗೆ ಜಂಗಮರಿಗೆ ಕಾಳನ್ನು ದಾನ ನೀಡುತ್ತಾರೆ. ಯಾಚಕರಿಗೂ ಕಾಳನ್ನು ದಾನಮಾಡಿ ನಂತರ ಮನೆಗೆ ಹೇರಿಕೊಂಡು ಹೋಗುತ್ತಾರೆ. ಬೆಳೆದುದೆಲ್ಲವನ್ನು ತಾವೇ ಉಣ್ಣದೆ ಹಸಿದ ಜಂಗಮರಿಗೂ ಹಿಡಿಯಷ್ಟು ನೀಡುವ ಸಂಪ್ರದಾಯ ಒಕ್ಕಲಿಗರಲ್ಲಿದೆ. ಕಣದಲ್ಲಿ ಹಾಡು ಹೇಳುವ ದಾನ ನೀಡುವ ಕಾರ್ಯಚಟುವಟಿಕೆಗಳನ್ನು ಈ ಗೀತೆಯಲ್ಲಿ ವರ್ಣಿಸಲಾಗಿದೆ.

**ಬನ್ನಿ ಹಬ್ಬ**

ಆಶ್ವೀಜ ಶುದ್ಧ ಪಾಡ್ಯದಿಂದ ದಶಮಿಯವರೆಗೆ ಹತ್ತು ದಿನಗಳು ದಸರಾ ಹಬ್ಬವನ್ನು ಆಚರಿಸುತ್ತಾರೆ. ಹತ್ತು ದಿನಗಳಲ್ಲಿ ಕೊನೆಯ ವಿಜಯದಶಮಿಯು ಬಹು ಮುಖ್ಯವಾದ ದಿನ. ಕರ್ನಾಟಕದಲ್ಲಿ ಈ ಹಬ್ಬದ ಆಚರನೆ ಬಹು ಹಿಂದಿನ ಕಾಲದಿಂದಲೂ ನಡೆದು ಬಂದಿದೆ. ವಿಜಯದಶಮಿಯ ದಿನ ಗ್ರಾಮದವರು ದೇವತೆಗಳನ್ನು ಊರ ಹಿಂದಿನ ಬನ್ನಿಮರದ ಬಳಿ ತರುತ್ತಾರೆ. ದೇವರುಗಳನ್ನು ಪೂಜಿಸುತ್ತಾರೆ. ಅಲ್ಲಿ ಸೇರಿದ ಜನರೆಲ್ಲರೂ ಬನ್ನಿ ಮರದ ಸೊಪ್ಪನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಕಿರಿಯರು ಹಿರಿಯರಿಗೆ ಬನ್ನಿ ಸೊಪ್ಪನ್ನು ಕೊಟ್ಟು ಪಾದಕ್ಕೆ ನಮಿಸಿ ಆಶೀರ್ವಾದ ಪಡೆಯುತ್ತಾರೆ. ಹಿರಿಯರು ಪರಸ್ಪರರು ಕೈಕೈಗೆ ಬನ್ನಿ ಮುಡಿಯುವುದೆಂದು ಕರೆಯುತ್ತಾರೆ. ಬನ್ನಿ ಮುಡಿಯುವ ಆಚರಣೆಯನ್ನು 'ಬನ್ನಿ ಹಬ್ಬ' ಗೀತೆಯು ಸ್ವಾರಸ್ಯಕರವಾಗಿ ವರ್ಣಿಸಿದೆ.

ಬನ್ನಿ ಮುಡಿಯೋಣ ಬಾರಾ ಕೋಲುಕೋಲಾ
ಚಿನ್ನ ತರುವೋಣ ಬಾರಾ ಕೋಲುಕೋಲಾ
ಊರ ಸೀಮೆಯ ದಾಟಿ ಕಾಡ ಗಡಿಯನು ಸೇರಿ
ಕಾಡ ಸಂಪತ್ತನ್ನು ತರಬನ್ನಿ ..........

ಎಂದು ಗೀತೆಯು ಪ್ರಾರಂಭವಾಗಿದೆ. ಬನ್ನಿ ಮುಡಿಯುವುದು ಎಂದರೆ ಕಾಡಿನ ಸಂಪತ್ತನ್ನು ನಾಡಿಗೆ ತರುವುದು ಎಂಬುದನ್ನು ಈ ಗೀತೆಯು ಸೂಚಿಸಿದೆ. ಆದಿಯಲ್ಲಿ ಮನುಷ್ಯ ಕಾಡಿನ ವಾಸಿಯಾಗಿದ್ದ. ಕಾಲಕ್ರಮೇಣ ಕೃಷಿಯನ್ನು ಮಾಡುತ್ತಾ ನಾಡನ್ನು ಕಟ್ಟಿದ. ಆದರೆ ಕಾಡನ್ನು ತೊರೆದು ಮನುಷ್ಯ ಬದುಕುವುದು ಕಷ್ಟ. ಈ ಸತ್ಯವನ್ನು ಅರಿತ ಮನುಷ್ಯ ಹಲವು ಆಚರಣೆಗಳ ಮೂಲಕ ಕಾಡಿನ ಸಂಬಂಧವನ್ನು ಉಳಿಸಿಕೊಂಡು ಬಂದಿದ್ದಾನೆ. ಬನ್ನಿ ಹಬ್ಬ ಅವುಗಳಲ್ಲಿ ಒಂದು. ಬನ್ನಿ ಹಬ್ಬದ ಆಚರಣೆಯು ಕಾಡಿಗೂ

ನಾಡಿಗೂ ಸೇತುವಾಗಿದೆ.

ನಾವು ಕುಣಿಯೋಣ ಬನ್ನಿ, ಹ್ಯಾಂವ ಮರೆಯೋಣ ಬನ್ನಿ
ಜೀವ ಒಂದಾಗಿ ಇರಬನ್ನಿ
ಇಂದಾ ಮುಡಿಯುವ ಬನ್ನಿ ಮುಂದೆ ಮಗ ಹೊನ್ನಾಗಿ
ಕುಂದಣದಾರೂತಿ ಬೆಳೆಗುದಕ.........

ನೋವುಗಳನ್ನು ಮರೆತು, ಬೇಧ ಭಾವಗಳನ್ನು ತೊರೆದು ಎಲ್ಲರೂ ಒಂದಾಗಿ ಬೆರೆತು ಸುಖಸಂತೋಷಗಳಿಂದ ನಲಿಯುವುದು ಬನ್ನಿ ಹಬ್ಬದ ಆಚರಣೆಯಾಗಿದೆ. ಬನ್ನಿ ಮುಡಿಯುವುದರಿಂದ ಪರದಲ್ಲಿ ಸುಖ ಸಂತೃಪ್ತಿಗಳು ಪ್ರಾಪ್ತವಾಗುತ್ತವೆ. ಬನ್ನಿ ಮುಂದಿನ ಭವಿಷ್ಯತ್ತನ್ನು ಬೆಳಗುವ ಜ್ಯೋತಿ ಎಂಬುದಾಗಿ ಜನಪದರು ನಂಬುತ್ತಾರೆ.

**ಅಂಟಿಕೆ ಪಂಟಿಕೆ**

ದೀಪಾವಳಿ ಕನ್ನಡಿಗರಿಗೆ ಬಹುದೊಡ್ಡ ಹಬ್ಬ. ದೀಪಾವಳಿಯನ್ನು ಕನ್ನಡಿಗರು ಸಡಗರ ಸಂಭ್ರಮದಿಂದ ಆಚರಿಸುತ್ತಾರೆ. ಈ ಹಬ್ಬದಲ್ಲಿ ಹಲವಾರು ಆಚರಣೆಗಳು ನಡೆಯುತ್ತವೆ. ಅವುಗಳಲ್ಲಿ ಅಂಟಿಕೆಪಂಟಿಕೆಯೂ ಒಂದು. ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಅಂಟಿಕೆಪಂಟಿಕೆ ಆಚರಣೆಯಲ್ಲಿದೆ. ಅಂಟಿಕೆಪಂಟಿಕೆಯನ್ನು ಹಬ್ಬ ಮಾಡುವುದು ದೀಪನೀಡುವುದು ಎಂಬ ಹೆಸರುಗಳಿಂದಲೂ ಕರೆಯುತ್ತಾರೆ. ದೀಪಾವಳಿಯ ಬಲಿಪಾಡ್ಯಮಿ ದಿನದಿಂದ ಮೂರು ದಿನಗಳ ವರೆಗೆ ಅಂಟಿಕೆಪಂಟಿಕೆ ಆಚರಣೆ ನಡೆಯುತ್ತದೆ. ಒಂದು ಸೀಮೆಯ ಅಂದರೆ ಮೂರ್ನಾಲ್ಕು ಗ್ರಾಮದ ಯುವಕರು ನಾಲ್ಕರಿಂದ ಆರುಜನರ ಒಂದೊಂದು ತಂಡಗಳಾಗಿ ಅಂಟಿಕೆಪಂಟಿಕೆ ಹಾಡಲು ಊರೂರಿಗೆ ಹೋಗುತ್ತಾರೆ. ಪ್ರಾರಂಭದ ದಿನದ ರಾತ್ರಿ ಆ ಸೀಮೆಯ ದೇವಸ್ಥಾನಕ್ಕೆ ಹೋಗೆ ಅಲ್ಲಿ ನಮ್ಮ ಹಣತೆಯನ್ನು ಹಚ್ಚಿಕೊಂಡು ಹಾದಿಯುದ್ದಕ್ಕೂ ಹಾಡುತ್ತಾ ಗ್ರಾಮಗಳಿಗೆ ಹೋಗುತ್ತರೆ.
ಕಾಡುದಾರಿಯಲ್ಲಿ ಯುವಕರು ಹಾಡುತ್ತಲೇ ಊರನ್ನು ಪ್ರವೇಶಿಸುತ್ತಾರೆ. ಗ್ರಾಮದ ಪ್ರತಿ ಮನೆಯ ಬಾಗಿಲನ್ನು ತೆಗೆಯಿಸಿ ಜ್ಯೋತಿಯನ್ನು ಕೊಡುತ್ತಾರೆ.

ಅಂದನುಳ್ಳದ ಮನೆಗೆ ಚಂದನುಳ್ಳ ಕದವು
ಚಂದನುಳ್ಳ ಕದಕೆ ಚಿನ್ನದ
ಚಂದನುಳ್ಳ ಕದಕ್ಕೆ ಚಿನ್ನದ ಚಿಲುಕವು
ಚಂದಿರನಂಥಯ್ಯ ತೆಗೆಬನ್ನಿ

ಕದಹಾಗಿ ಮಲಗಿರುವ ಮನೆಯವರನ್ನು ಎಚ್ಚರಿಸುವ ವಿಧಾನ ಅಪಾಯಮಾನವಾದುದು. ಈ ಭಾಗದಲ್ಲಿ ಕದವನ್ನು ವರ್ಣಿಸಿರುವ ರೀತಿ ಸೊಗಸಾಗಿದೆ. ಮನೆಯವರನ್ನು ಹಾಡಿನಲ್ಲಿ ಮನ ಒಲಿಸಿ ಬಾಗಿಲು ತೆಗೆಸುವ ಯುವಕರ ಜಾಣ್ಮೆಗೆ ಮೆಚ್ಚಬೇಕಾದ್ದು.

ಎಣ್ಣೆಯ ನೆರೆದರೆ ಪುಣ್ಯವು ನಿಮಗಾದಾವು
ಮುಂದೆ ಶಿವನೊಗಿ ಗೊಂಡರಿಕ್ಯಾಗಿ
ಮುಂದೆ ಶಿವನೊಗಿ ಗೊಂಡರಿಕ್ಯಾದ ಕಾರಣದಿಂದ
ಆನಂದನುಗಾಲ ಸುಖಿಬಾಳಿ.......

ಅಂಟಿಕೆಪಂಟಿಕೆ ಯುವಕರು ಶುಭಕೋರಿದ ರೀತಿಯು ನಿನೂತನವಾಗಿದೆ. ಹೃದಯ ತುಂಬಿದ ಅವರ ಹಾರೈಕೆಯಿಂದ ಮನೆಯವರಿಗೂ ಸಂತೋಷವಾಗುತ್ತದೆ.

**ಮಾನೌಮಿ ಹಬ್ಬ**

ಅಶ್ವಜಶುದ್ಧ ನವಮಿಯ ಹಬ್ಬದಲ್ಲಿ ಹಾಡುವ ಹರಕೆಯ ಪದಗಳೇ ಮೌನಮಿಯ ಪದಗಳು. ಅಶ್ವಜಶುದ್ಧ ನವಮಿಯ ಹಬ್ಬ ಪ್ರಾರಂಭವಾಗುವ ಪೂರ್ವದಲ್ಲಿ ಈ ಪದಗಳನ್ನು ಹಾಡಲು ಸಿದ್ಧತೆಗಳು ನಡೆಯುತ್ತವೆ. ಗ್ರಾಮದಲ್ಲಿ ಮಠದ ಅಯ್ಯಗಳು ಅಥವಾ ಓದುವ ಅಯ್ಯಗಳು ಯೋಗ್ಯ ಹುಡುಗರನ್ನು ಹುಡುಕಿ ಹಾಡಲು ತರಬೇತಿ ನೀಡುತ್ತಾರೆ. ಹಬ್ಬದಲ್ಲಿ ಹುಡುಗರು ನೀಟಾದ ಸಮವಸ್ತ್ರವನ್ನು ತೊಟ್ಟಿರುತ್ತಾರೆ. ಹಬ್ಬದ ದಿನ ವಿಶೇಷವಾಗಿ ಅಲಂಕಾರ ಮಾಡಿಕೊಂಡು ಹಳ್ಳಿಯಲ್ಲಿ ಈ ಪದಗಳನ್ನು ಹಾಡುತ್ತಾ ಸಂಚರಿಸುತ್ತಾರೆ. ಈ ಹಾಡುಗಳು ವಿಶೇಷವಾಗಿ ಹಾರೈಕೆಯಿಂದ ಕೂಡಿರುತ್ತವೆ. ವ್ಯಕ್ತಿಗಳಿಗೆ ಒಳ್ಳೆಯದನ್ನು ಹಾರೈಸುವ ಪದಗಳಿರುವಂತೆ ಇಡೀ ನಾಡಿಗೆ, ಸಮಾಜಕ್ಕೆ ಹಿತವಾಗಲೆಂದು ಹಾರೈಸುವ ಪದರಳೂ ಇವೆ.

ಮಳೆಹೊಯ್ದು ಬೆಳೆ ಬೆಳೆದು ಇಳೆ ದಣಿಯಲೆಂದು
ತಿಳಿಗೊಳಗಳುಕ್ಕಿ ಗೋವ್ಗಳು ಕರೆಯಲೆಂದು
ನಳನ ಮುಖಿಯರು ಪುತ್ರಿಯರ ಪಡೆಯಲೆಂದು
ಇಳೆಯೊಳಗೆ ಹರಿಸಿದೆವು ಬಾಲಕರು ಬಂದು........

ಮಳೆ ಚನ್ನಾಗಿ ಹೊಯ್ದರೆ ಬೆಳೆಯುಂಟು. ದನಕರುಗಳಿಗೆ ಮೇವು ನೀರು ಸಮೃದ್ಧಿ. ಮಳೆ ಇಲ್ಲದಿದ್ದರೆ ಮನುಷ್ಯನ ಬದುಕು ಅಸ್ತವ್ಯಸ್ತವಾಗುತ್ತದೆ. ದನಕರುಗಳಿಗೆ ಮೇವು ನೀರಿಲ್ಲದೆ ಸಾಯತ್ತವೆ. ಮಳೆಯಿಂದ ಸಮೃದ್ಧಿ ಪ್ರಾಪ್ತವಾಗುತ್ತದೆ. ಜನಪದರು ಸಮಾಜದ ಹಿತವನ್ನು ಬಯಸುವವರು. ಸ್ವಾರ್ಥಿಗಳಲ್ಲ. ಸಮಾಜದ ಹಿತದಲ್ಲಿ ವ್ಯಕ್ತಿಯ ಹಿತವಡಗಿರುವುದನ್ನು ಬಲ್ಲರು. ಆದ್ದರಿಂದಲೇ ಜನಪದರು ಸದಾ ಕಾಲ ತಮ್ಮ ಸಮಾಜದ ಹಿತಕ್ಕಾಗಿ ಹಾರೈಸುತ್ತಾರೆ.
ಮಾನೌಮಿ ಪದ ಹಾಡುವ ಯುವಕರು ಸಮಾಜದಲ್ಲಿ ಒಳಿತು ಕೆಡುಕನ್ನು ಬಲ್ಲವರು. ಮನುಷ್ಯನ ಸಾಮಾಜಿಕ ಬದುಕು ಎತ್ತರ ಮಟ್ಟದ್ದಾಗಿರಲು ಅವನಿರಬೇಕಾದ ಗುಣಗಳ ಕಡೆಗೂ ತಮ್ಮ ಪದಗಳನ್ನು ಹರಿಬಿಡುತ್ತಾರೆ.

ನಡೆಯುಂಟು ಕೆಲವರಿಗೆ ನುಡಿವ ಗುಣವಿಲ್ಲ
ನುಡಿಯುಂಟು ಕೆಲವರಿಗೆ ನಡೆವ ಗುಣವಿಲ್ಲ
ನಡೆನುಡಿಗಳೆರಡುಂಟು ಕೊಡುವ ಗುಣವಿಲ್ಲ
ನಡೆನುಡಿಯು ಕೊಡುವ ಗುಣ ನಿಮಗಲ್ಲದಿಲ್ಲ .........

ಮನುಷ್ಯನಾದವನು ತನ್ನ ಸಮಾಜದಲ್ಲಿ ಗುಣಸಂಪನ್ನನಾಗಿ ಜೀವಿಸಬೇಕು. ಸಮಾಜ ಮೆಚ್ಚುವಂತೆ ಬದುಕಲು ಅವನಿಗಿರಬೇಕಾದ ಉತ್ತಮ ನುಡಿ. ಆದರೆ ಇವೆರಡರ ಜೊತೆಯಲ್ಲಿ ಕೊಡುವ ಗುಣವೂ ಇರಬೇಕು. ತಾನು ಸಂಪಾದಿಸಿದ್ದನ್ನು ತಾನು, ತನ್ನ ಕುಟುಂಬಕ್ಕೆ ಮಾತ್ರ ವಿರಲಿ ಎಂದು ಬಯಸುವವನು ಎಂದಿಗೂ ಉತ್ತಮ ವ್ಯಕ್ತಿಯಾಗಲಾರ. ಉತ್ತಮ ನಡೆನುಡಿಯೊಂದಿಗೆ ಕೊಡುಗೈ ದಾನಿಯಾಗಿದ್ದರೆ ಅಂತಹವನನ್ನು ಸಮಾಜ ಮೆಚ್ಚಿಕೊಳ್ಳುತ್ತದೆ.

**ಪರಾಮರ್ಶನ ಗ್ರಂಥಗಳು**


೧. ಜಾನಪದ ಕೈಪಿಡಿ : ಕನ್ನದ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೦.
೨. ಜನಪದರು ನಾವು : ಡಾ.ಹಿ.ಶಿ. ರಾಮಚಂದ್ರೆಗೌಡ : ಮಾನಸಗಂಗೋತ್ರಿ, ಮೈಸೂರು, ೧೯೯೩.
೩. ಜನಪದ ಕಾವ್ಯ : ಗಿರಡ್ಡಿ ಗೋವಿಂದರಾಜು : ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ೧೯೯೪.
೪. ಜಾನಪದ ಅಧ್ಯಯನ : ದೇ ಜವರೇಗೌಡ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
೫. ಜಾನಪದ ವಿವಿಧ ಮುಖಗಳು : ಪ್ರೊ. ಶ್ರೀಕಂಠ ಕೂಡಿಗೆ : ಬೆಂಗಳೂರು.
೬. ಜಾನಪದ ಪ್ರತಿಭೆ : ಮೈಸೂರು.